# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 218 (261) |
| ಸದಸ್ಯರ ಹೆಸರು | ಶ್ರೀ ಹೆಚ್.ಎಂ.ರಮೇಶ್ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 09-12-2020 |
| ಉತ್ತರಿಸುವವರು | ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮುಜರಾಯಿ (ಧಾರ್ಮಿಕ ದತ್ತಿ) ವ್ಯಾಪ್ತಿಗೆ ಒಳಪಡುವ ಎಷ್ಟು ದೇವಾಲಯಗಳಿವೆ; ಇವುಗಳಲ್ಲಿ 'ಎ' ದರ್ಜೆಯ 'ಬಿ' ದರ್ಜೆ, 'ಸಿ' ದರ್ಜೆ ದೇವಾಲಯಗಳು ಯಾವುವು?</td><td>ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಟ್ಟಂತೆ ಒಟ್ಟು 34563 ಅಧಿಸೂಚಿತ ಸಂಸ್ಥೆಗಳಿವೆ. ಪ್ರವರ್ಗವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಪ್ರವರ್ಗ</th><th>ವಿವರ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>205</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ರೂ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>139</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34,219</td></tr>
<tr><td></td><td>ಒಟ್ಟು</td><td>34,563</td></tr>
</table>
</td></tr>
<tr><td>ಆ)</td><td>ಇವುಗಳಲ್ಲಿ ಎ,ಬಿ.ಸಿ ದರ್ಜೆಗಳನ್ನು ಯಾವ ಮಾನದಂಡದಲ್ಲಿ ನಿರ್ಧರಿಸಲಾಗುವುದು (ವಿವರ ನೀಡುವುದು)</td><td>ಸದರಿ ಸಂಸ್ಥೆಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3(1) ರಂತೆ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಪ್ರವರ್ಗ 'ಎ', 'ಬಿ' ಮತ್ತು 'ಸಿ' ಎಂದು ವರ್ಗೀಕರಿಸಿದೆ.<br><br>ಎ) ದೇವಾಲಯದ ವಾರ್ಷಿಕ ವರಮಾನ ರೂ.25.00ಲಕ್ಷಗಳಿಗಿಂತ ಹೆಚ್ಚಿರುವ ದೇವಾಲಯಗಳನ್ನು ಪ್ರವರ್ಗ-ಎ ದೇವಾಲಯಗಳೆಂದು<br>ಬಿ) ದೇವಾಲಯದ ವಾರ್ಷಿಕ ವರಮಾನ ರೂ.5.00ಲಕ್ಷ ಗಳಿಂದ 25.00ಲಕ್ಷ ರೂಗಳವರೆಗೆ ವರಮಾನ ಹೊಂದಿರುವ ದೇವಾಲಯಗಳನ್ನು ಪ್ರವರ್ಗ-ಬಿ ದೇವಾಲಯಗಳೆಂದು<br>ಸಿ) ದೇವಾಲಯದ ವಾರ್ಷಿಕ ವರಮಾನ ರೂ.5.00ಲಕ್ಷಗಳಿಗಿಂತ ಮೀರದ/ಕಡಿಮೆ ಇರುವ ದೇವಾಲಯಗಳನ್ನು ಪ್ರವರ್ಗ-ಸಿ ದೇವಾಲಯಗಳೆಂದು ವರ್ಗೀಕರಿಸಲಾಗಿದೆ.</td></tr>
</table>

.....2

| | | |
|---|---|---|
| ಇ) | ಸದರಿ ದೇವಾಲಯಗಳ ಅರ್ಚಕರಿಗೆ ಸರ್ಕಾರದಿಂದ ಎಷ್ಟು ವೇತನ ಪಾವತಿಯಾಗುತ್ತಿದೆ ಪ್ರಸಕ್ತ ಸಾಲಿನಲ್ಲಿ ಪಾವತಿಯಾದ ವೇತನವೆಷ್ಟು? | ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳಲ್ಲಿನ ಅರ್ಚಕರಿಗೆ ವೇತನ ನೀಡುವ ಸಂಬಂಧ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಾವಳಿಗಳು 2002ರ ನಿಯಮ 8 ಅನ್ನು ಮತ್ತಷ್ಟು ತಿದ್ದುಪಡಿ ಮಾಡಿ, ಸರ್ಕಾರದ ಆದೇಶ ಸಂಖ್ಯೆ: ಕಂಇ 54/ ಮುಸೇವಿ 2017 ದಿನಾಂಕ: 17-07-2019ರಂತೆ ಪರಿಷ್ಕೃತ ವೇತನ ಶ್ರೇಣಿಗಳನ್ನು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಆಯಾಯ ದೇವಾಲಯದ ಆದಾಯದಲ್ಲಿ ಸಿಬ್ಬಂದಿ ವೆಚ್ಚ ಶೇ.35ರಷ್ಟು ಮೀರದಂತೆ ನೌಕರರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸಲಾಗುತ್ತಿದೆ. |
| ಈ) | ಪ್ರಸಕ್ತ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟ ಹಣವೆಷು :, ಹಾಗೂ ಖರ್ಚಾದ ಹಣ ಎಷ್ಟು? | ಪ್ರಸಕ್ತ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ವಿವಿಧ ಯೋಜನೆಗಳಿಗೆ ಆಯವ್ಯಯದಲ್ಲಿ ಒಟ್ಟು ರೂ.**38336.00**ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಇದರಲ್ಲಿ ಈವರೆಗೆ ರೂ.**10810.80**ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಈ ಮೊತ್ತದಲ್ಲಿ ರೂ.**7425.41**ಲಕ್ಷಗಳ (2020 ನವೆಂಬರ್ ಅಂತ್ಯಕ್ಕೆ) ಹಣವು ಖರ್ಚಾಗಿರುತ್ತದೆ. |

ಸಂಖ್ಯೆ: ಕಂಇ 172 ಮುಸಪ್ರ 2020

**(ಕೋಟಾ ಶ್ರೀನಿವಾಸ ಪೂಜಾರಿ)**
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ,
ಮೀನುಗಾರಿಕೆ ಹಾಗೂ ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು